

ನಿನಗೆ ಪೂರ್ತಿ ವೀಕೆಂಡು ಸಿಗುತ್ತದೆ. ಎಂಜಾಯ್!'

ಪ್ರಯತ್ನವಿಲ್ಲದೇ 'ಓಹ್ ಮೈ ಗಾಡ್, ಥ್ಯಾಂಕ್ಸ್!' ಎಂಬ ಪದಪುಂಜ ನನ್ನಿಂದ ಹೊರ ಬಿದ್ದಿತ್ತು.

'ಥ್ಯಾಂಕ್ಸ್ ನನಗಲ್ಲ. ಇಟಲಿಯಿಂದ ರಜೆಗೆಂದು ಬಂದಿರುವ ನನ್ನ ಚಿಕ್ಕಮ್ಮನಿಗೆ ಹೇಳುವಂತಿ' ಅಂತ ತನ್ನ ಎಂದಿನ ಶೈಲಿಯಲ್ಲಿ ತಬ್ಬಿ ಕಣತಲೆಗೆ ಒಂದು ಮುತ್ತಿಟ್ಟು ನಡೆದಿದ್ದಳು ಆಲಿಸನ್, ಅವಳ ದುಬಾರಿ ಅತ್ತರಿನ ತೆಳು ಪೊರೆಯನ್ನು ಚೂರು ನನ್ನ ಎದೆಯ ಮೇಲೂ ಚೂರು ಅವಳು ಸರಿದು ಹೋದ ಗಾಳಿಯಲ್ಲೂ ಇಷ್ಟಿಷ್ಟೇ ಕಳಚುತ್ತ. ಅಪ್ಪಿದಾಗ ಅವಳ ಸದೃಢ ಬೆನ್ನು, ನನಗಿಂತ ಒಂದು ಫೂಟಾದರೂ ಎತ್ತರಕ್ಕಿರುವ ಅವಳ ತೆಳ್ಳಗಿನ ಮೈಕಟ್ಟು ಬೇಡಬೇಡವೆಂದರೂ ಮುಂದಿನ ಕೆಲ ಕ್ಷಣಗಳು ಮೋಹಜಾಲದಂತೆ ನನ್ನನ್ನಾವರಿಸಿಬಿಟ್ಟಿದ್ದವು.

ಮತ್ತೀಗ ಇಲ್ಲಿ ಕುಳಿತಿದ್ದೇನೆ, ಅವಳೇ ಕೈಯ್ಯಾರೆ ಹಿಡಿಸಿ ಹೋದ ಚಾಕ್ಲೆಟ್ ಕೇಕಿನ ಅಂಥದೇ ಇನ್ನೊಂದು ಮೋಹಜಾಲದಲ್ಲಿ ಬಂಧಿತಳಾಗಿ.

ಈ ಸುಹಾಸನಾದರೂ ಇವತ್ತೇ ಟೆಕ್ಸಸ್ಸಿಗೆ ತೆರಳಬೇಕಿತ್ತೇ? ಕೆಲಸಕ್ಕೆ ಸಂಬಂಧಿಸಿದ ಯಾವ ಭೇಟಿಗಳನ್ನೂ ವಾರಾಂತ್ಯ ಇರಿಸಿಕೊಳ್ಳಬೇಡ ಅಂತ ಮಹಾ ನನಗೆ ಆಗ್ರಹಪಡಿಸಿ ಈಗ, 'ಅಂಥ ಬಿಲಿಯನೇರ್ ಕ್ಲಯಂಟು ಬಾ ಅಂತ ಕರೆದಿರುವಾಗ, ಬರಂಗಿಲ್ಲ ವೀಕೆಂಡು ನನ್ನ ಹೆಂಡತಿ ಮಗ್ಗುಲಾಗೆ ಮಲಗೋದದೆ ಅಂತ ಹೇಳೋಕಾಗುತ್ತೇನೆ?' ಅಂತ ಅದ್ಯಾವನೋ ಲೆವೆನ್‌ಸ್ಕಿ ಅನ್ನುವವನ ಹುಟ್ಟುಹಬ್ಬದ